Compensation to Local bodies under Motor Vehicles Tax

121. SRI T. R. SHAMANNA (Fort).— Will the Minister for Municipal Administration and Political Pensions be pleased to state :—

(*a*) whether the Government is aware of the fact that the ocal bodies particularly the Bangalore City Corporation are pressing for payment of increased adequate compensation for loss of Motor Vehicle Tax Toll Revenue etc., ;

(*b*) if so the steps taken to increase Motor Vehicle Tax compensation on the basis of present Motor Vehicle Tax collection ?

SRI D. K. NAIKAR.—(Minister for Municipal Administration and Political Pensions

(*a*) Yes.

(*b*) The Municipal Finance Enquiry Committee examined this question and recommended that compensation equal to 25% of the collection under Motor Vehicles Tax might be allotted to the Local bodies. The matter is under the consideration of Government.

ಶ್ರೀ ಟಿ. ಆರ್. ಶಾಮಣ್ಣ.— ಸ್ವಾಮಿ, ಈಗ ಈ ಸ್ಥಳೀಯ ಸಂಸ್ಥೆಗಳಿಗೆ ವಾಹನದ ಟ್ಯಾಕ್ಸ್ ಮತ್ತು ಟೋಲ್‌ಗೇಟ್ ಟ್ಯಾಕ್ಸ್‌ಗೆ ಸಂಬಂಧಪಟ್ಟ ತೆರಿಗೆಗಳನ್ನು ರದ್ದುಮಾಡಿದಾಗ ಸ್ಥಳೀಯ ಸಂಸ್ಥೆಗಳಿಗೆ ಪರಿಹಾರ ಕೊಡತಕ್ಕ ತೀರ್ಮಾನ ತೆಗೆದುಕೊಂಡಿದ್ದಾರೆ. ಇವೊತ್ತು ನಾನು ಬೇರೆ ಸ್ಥಳೀಯ ಸಂಸ್ಥೆಗಳ ವಿಚಾರದ ಬಗ್ಗೆ ಹೇಳುವುದಿಲ್ಲ. ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ೧೯೫೬ರಲ್ಲಿ ೬೫ಲಕ್ಷ ರೂಪಾಯಿ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ವಸೂಲಾಗುತ್ತಿತ್ತು. ಆದರೆ ೧೦ ಲಕ್ಷ ರೂಪಾಯಿ ರಸ್ತೆ ಕೆಲಸಕ್ಕಾಗಿ ಖರ್ಚಾಗುತ್ತಿತ್ತು. ನೆನ್ನೆಯ ದಿವಸದ ಅಂಕಿಅಂಶದ ಪ್ರಕಾರ ಆರೂವರೆ ಕೋಟಿ ರೂಪಾಯಿ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ವಸೂಲು ಮಾಡುತ್ತಿದ್ದಾರೆ. ಬೆಂಗಳೂರು ನಗರ ಕಾರ್ಪೋರೇಷನ್‌ನವರು ೩ ಲಕ್ಷ ರೂಪಾಯಿಗಿಂತಲೂ ಹೆಚ್ಚು ಹಣ ರಸ್ತೆಗಳಿಗಾಗಿ ಖರ್ಚು ಮಾಡುತ್ತಿದ್ದಾರೆ. ಆದರೆ ೧೯೫೬ರಲ್ಲಿ ಗೊತ್ತುಮಾಡಿದಂತ ಪರಿಹಾರವನ್ನೇ ಈಗಲೂ ಕೊಡುತ್ತಿದ್ದಾರೆ, ಇದು ನ್ಯಾಯವಲ್ಲ. ಆದ್ದರಿಂದ ಇದರ ಬಗ್ಗೆ ಪರಿಣಾಮಕಾರಿಯಾದ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡುತ್ತೀರಾ ?

† ಶ್ರೀ ಡಿ. ಕೆ. ನಾಯ್ಕರ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಈ ಮೊದಲೇ ಈ ಸದನದಲ್ಲಿ ಉತ್ತರ ಹೇಳಿದ್ದೇನೆ. ಇದರ ಬಗ್ಗೆ ಖಾರ್ಗೆ ಕಮಿಟಿಯನ್ನು ನೇಮಿಸಿ ಆ ಕಮಿಟಿಯವರು ಮೋಟಾರ್ ವೆಹಿಕಲ್ ಟ್ಯಾಕ್ಸ್ ಟೋಟಲ್ ಕಲ್ಲೆಕ್ಷನ್‌ನಲ್ಲಿ ೨೫ ಪರಸೆಂಟ್ ಲೋಕಲ್ ಬಾಡೀಸ್‌ಗಳಿಗೆ ಕೊಡಬೇಕೂ ಎಂದು ಶಿಫಾರಸ್ಸು ಮಾಡಿದ್ದಾರೆ, ಅದು ಸರ್ಕಾರದ ವಿಚಾರಣೆಯಲ್ಲಿ ಇದೆ ಎಂದು ಹೇಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.— ಸ್ವಾಮಿ, ಸುಮಾರು ೨೦ ವರ್ಷಗಳಿಂದ ಪರಿಹಾರವಾಗದೇ ಇದ್ದಂಥ ವಿಚಾರದ ಬಗ್ಗೆ ನೆನ್ನೆ ಸಾರಿಗೆ ಮಂತ್ರಿಗಳನ್ನು ಕೇಳಿದಾಗ ಇದರ ಬಗ್ಗೆ ಫೈನಾನ್ಸ್ ಮಿನಿಸ್ಟರ್ ಹತ್ತಿರ ಮಾತನಾಡಿ ಎಂದು ಹೇಳಿದರು, ಮಾನ್ಯ ಹಣಕಾಸಿನ ಮಂತ್ರಿಗಳನ್ನು ಕೇಳಿದರೆ ನನಗೆ ಲೋಕಲ್ ಬಾಡೀಸ್ ಮಿನಿಸ್ಟರ್ ರೆಪ್ರಸೆಂಟೇಷನ್ ಕಳಿಸಿಲಿ ಎಂದು ಹೇಳಿದರು. ಇದರ ಬಗ್ಗೆ ಖಾರ್ಗೆ ಕಮಿಟಿ ಯವರು ರಿಸೋರ್ಸ್‌ಸ್ ಕಮಿಟಿಯವರು, ತೀರ್ಮಾನ ತೆಗೆದುಕೊಂಡು ಅವರು ಕಡ್ಡಾಯವಾಗಿ ಕೊಡಬೇಕು ಎಂದು ಹೇಳಿರುವುದರಿಂದ ಮಾನ್ಯ ಹಣಕಾಸಿನ ಸಚಿವರು, ಮಾನ್ಯ ನಗರಾಡಳಿತ ಸಚಿವರು ಮತ್ತು ಮಾನ್ಯ ಟ್ರಾನ್ಸ್‌ಪೋರ್ಟ್ ಸಚಿವರು ಮೂರೂ ಜನರು ಸೇರಿ ಇದರ ಬಗ್ಗೆ ಕಾರ್ಯಕ್ರಮ ಹಾಕಿ ಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್.— ಇದರ ಬಗ್ಗೆ ಮೀಟಿಂಗ್ ಕರೆದು ತೀರ್ಮಾನ ಮಾಡಬೇಕು ಎಂದು ಆಗಿದೆ. ಆದಷ್ಟು ತೀವ್ರವಾಗಿ ನಿರ್ಣಯ ಮಾಡುವುದು ಇದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.— ಸ್ವಾಮಿ ಸಾರಿಗೆ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಕೊಡುವ ಕಾಲದಲ್ಲಿ ಟೈರು, ಟ್ಯೂಬುಗಳಿಗೆ ಆಕ್ಸ್ಪಾಯಿ ಹಾಕಿದ್ದೇವೆ ಅದರಲ್ಲಿ ಅಡ್ಜಸ್ಟ್ ಮಾಡಿಕೊಳ್ಳು ತ್ತಾರೆ ಎಂದು ಹೇಳಿದರು. ಇವೊತ್ತು ಬೆಂಗಳೂರು ನಗರದಲ್ಲಿ ೧೪ ನ್ಯಾಷನಲ್ ಹೈವೇ ಪಾಸಾಗು ತ್ತದೆ. ಆದ್ದರಿಂದ ರೋಡ್ ಮೈನ್‌ಟೆನೆನ್ಸ್ ಬಹಳ ಕಷ್ಟ ಇದೆ. ಮಾನ್ಯ ಸದಸ್ಯರಾದ ಶಾಮಣ್ಣ ನವರು ಹೇಳಿದ ಹಾಗೆ ಪರಿಶೀಲನೆ, ಪರಿಶೀಲನೆ ಎಂದುಕೊಂಡು ೨೦ ವರ್ಷದಿಂದ ಈ ರೀತಿ ಮಾಡಿದರೆ ಹೇಗೆ ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಒಂದು ನಿರ್ದಿಷ್ಟ ಕಾಲ ಹೇಳಬೇಕು. ಇವೊತ್ತು ನೂರಾರು ಮೈಲಿ ರಸ್ತೆ ಮೈನಟೆನೆನ್ಸ್ ಮಾಡಬೇಕಾಗಿದೆ. ಆದ್ದರಿಂದ ಈಗಲಾದರೂ ಇಷ್ಟು ದಿವಸದೊಳಗಾಗಿ ಪರಿಶೀಲನೆ ಮಾಡುತ್ತೇವೆ ಎನ್ನುತಕ್ಕ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.— ಮಾನ್ಯ ಸದಸ್ಯರು ನಾನು ಹೇಳಿದ ಉತ್ತರವನ್ನು ಸೂಕ್ಷ್ಮವಾಗಿ ಕೇಳಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಾ ಇರಲಿಲ್ಲ. ಇವೊತ್ತು ಲೋಕಲ್ ಬಾಡೀಸ್ ಕಷ್ಟ ಸುಧಾರಿಸಬೇಕು ಎನ್ನುವ ದೃಷ್ಟಿಯಿಂದಲೇ ಒಂದು ಕಮಿಟಿ ಮಾಡಿದ್ದು. ಆದರ ಬಗ್ಗೆ ಆದಷ್ಟು ತೀವ್ರದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೂ ಇಂತಿಷ್ಟೇ ದಿವಸ ಎಂದು ಹೇಳಲಿಕ್ಕೆ ಆಗುವುದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.— ಸ್ವಾಮಿ, ಆಕ್ಸ್ಪಾಯಿ ಬಗ್ಗೆ ಪುನರ್‌ಪರಿಶೀಲನೆ ಆಗುತ್ತಾ ಇರುವಾಗ ಒಂದು ಸಾರಿ ಕಾಂಪನ್‌ಸೇಟ್ ಕೊಟ್ಟರೆ ಪ್ರಿಸೀಡೆಂಟ್ ಆಗುತ್ತದೆ. ಆದ್ದರಿಂದ ಅದರ ಬಗ್ಗೆ ಒಂದು ನಿರ್ದಿಷ್ಟ ವಾದ ತೀರ್ಮಾನವನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆ ಕೊಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.— ಆಕ್ಸ್ಪಾಯಿಗೂ, ಮೋಟಾರ್ ವೆಹಿಕಲ್ ಟ್ಯಾಕ್ಸಿಗೂ ಸಂಬಂಧ ಇಲ್ಲ. ರೆಕಮೆಂಡೇಷನ್ ಮೇಲೆ ವಿಚಾರ ಮಾಡಬಹುದು ಎಂದು ಹೇಳಿದ್ದೇನೆ.

Loan Sanctioned by the World Bank to the KDDC

223. Sri M. B. Ramaswamy, (Anekal).— Will the Minister of State for Animal Husbandry be pleased to state :—

(*a*) the total loan amount sanctioned to KDDC by the World Bank;

(*b*) The Number of officials and officers working in the KDDC;

(*c*) of them, the Number of officers and officials belonging to SC and ST;

(*d*) the present rent of the building where the KDDC is housed;

(*e*) the total quantity of milk supplied by individuals and societies ;

(*f*) whether the KDDC has conducted a survey in all the taluks to start societies on Amul pattern ;

(*g*) whether the Bangalore Dairy has suffered loss or earned profit during the 1973-74 to 1976-77 ; (the detailed information may be furnished)